ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾವು ಏಕೆ ಇಲ್ಲಿರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಹಾಳಾಗುತ್ತಿದೆ. ಅದನ್ನು ಸಹಿಸಿಕೊಂಡು ಇಲ್ಲಿ ಕುಳಿತುಕೊಳ್ಳಬೇಕೇ?

ಅಧ್ಯಕ್ಷರು : ನಿಮಗೆ ಉತ್ತರ ಬೇಕಾದರೆ ಪುನಃ ಪ್ರಶ್ನೆ ಕೇಳಿ, ಇಲ್ಲ ಬರೆದು ಕಳುಹಿಸಿ ಕ್ರಮ ತೆಗೆದುಕೊಳ್ಳುತ್ತಾರೆ.

(ಶ್ರೀ ಬೈರೇಗೌಡರು ಸಭಾತ್ಯಾಗ ಮಾಡಿದರು)

<u>ವಿಷಯ : ಎಳನಡು , ಶಿರಾ ತಾಲ್ಲೂಕಿನ ನೇರಲಗುಡ್ಡ ಗ್ರಾಮಗಳಿಗೆ ಪಶುವೈದ್ಯ ಆಸ್ಪತ್ರೆಗಳು.</u>

840
ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ 'ಎಳನಡು' ಮತ್ತು ಶಿರಾ ತಾಲ್ಲೂಕಿನಲ್ಲಿ ' ನೇರಲಗುಡ್ಡ ' ಗ್ರಾಮಗಳಿಗೆ ಪಶುವೈದ್ಯ ಚಿಕಿತ್ಸಾಲಯಗಳ ಅವಶ್ಯಕತೆ ಇರುವುದು ಸರ್ಕಾರಕ್ಕೆ ತಿಳಿದಿದೆಯೇ?
ಆ) ಹಾಗಿದ್ದಲ್ಲಿ, 1993-94 ನೇ ಸಾಲಿನಲ್ಲಿ ಸದರಿ ಸ್ಥಳಗಳಿಗೆ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) ಹೌದು.
ಆ) 1993-94 ನೇ ಸಾಲಿನಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಇನ್ನು ಸ್ಥಳಗಳನ್ನು ಆಯ್ಕೆ ಮಾಡಿರುವುದಿಲ್ಲ. ಆಯ್ಕೆ ಮಾಡುವ ಸಮಯದಲ್ಲಿ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಗಳಿಗೆ ಮಂಜೂರಾತಿ ನೀಡುವ ವಿಷಯವನ್ನು ಪರಿಶೀಲೀಸಲಾಗುವುದು.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನೇರಲಗುಡ್ಡ ಮತ್ತು ಎಳನಡು ಗ್ರಾಮಗಳಿಗೆ ಪಶುವೈದ್ಯ ಚಿಕಿತ್ಸಾಲಯಗಳ ಅವಶ್ಯಕತೆ ಇದೆ. ಇದನ್ನು 1993-94 ರಲ್ಲಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. ತಾವು ತಾಕತ್ತು ಇರತಕ್ಕ ಮಂತ್ರಿಗಳಾಗಿದ್ದೀರಿ. ಇದನ್ನು ದಯಮಾಡಿ ಮಂಜೂರು ಮಾಡಬೇಕು.

ಶ್ರೀ ಟಿ. ಬಿ. ಜಯಚಂದ್ರ : ತಾಕತ್ತು ಅಂದರೆ ಸ್ವಲ್ಪ ಎಕ್ಸ್‌ಟ್ರಾ ತಾಕತ್ತು ಎಂದು ಇದೆ. ತಾಕತ್ತು ಎಲ್ಲಾರಿಗೂ ಇದೆ.

ಶ್ರೀ ವಾಟಾಳ್ ನಾಗರಾಜ್ : ತಾಕತ್ತು ಅಂದರೆ ಬಾದಾಮಿ ತಿನ್ನುತಾರೇನು ಅವರು.

ಶ್ರೀ ಕೆ.ಎನ್. ನಾಗೇಗೌಡ : ತಾಕತ್ತಾಗಿ ಇದ್ದಾರೆ ಎಂದರೆ ತಾಕತ್ತು ಆಗಿ ನಡೆಸುತ್ತಾರೆ ಎಂದು ಅರ್ಥ. ನಾನು ಎಕ್ಸ್‌ಟ್ರಾ ಬಾದಾಮಿ ತಿಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾಕತ್ತು ಆಗಿ ಇರುವ ಮಂತ್ರಿಗಳು ಎಂದರೆ ಬಾದಾಮಿ ತಿನ್ನುವವರು ಎಂದು.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ : ಬಾದಾಮಿ ತಿಂದರೆ ತಾಕತ್ತು ಬರುವುದಿಲ್ಲ. ನಿಮಗೆ ಏನು ತಾಕತ್ತು ಇದೇ ಅದೇ ತಾಕತ್ತು ನನಗೂ ಇದೆ. ನಮ್ಮ ತಾಕತ್ತು ಪರೀಕ್ಷೆ ಮಾಡುವುದಕ್ಕೆ ವಾಟಾಳರಿಗೆ ಏನು ಗೊತ್ತಿದೆ. ನೀವು ಸದನದಲ್ಲಿ ಏಕೆ ಲಘುವಾಗಿ ಮಾತನಾಡುತ್ತೀರಿ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ವಾಟಾಳ್‌ರವರೇ, ಅವರು ಸ್ವಲ್ಪ ಜವಾಬ್ದಾರಿ ಇದ್ದಂಥ ಮಂತ್ರಿಗಳು, ಒಳ್ಳೆಯ ಆಡಳಿತ ಕೊಡುತ್ತಿದ್ದಾರೆ ಎನ್ನುವ ದೃಷ್ಟಿಯಿಂದ ನಾನು ಆ ಮಾತನ್ನು ಹೇಳಿದ್ದೇನೆ. ನಂತರ ತಾವು ಬರೇ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತೀರೋ ಅಥವಾ ಸಿಬ್ಬಂದಿಗಳನ್ನು ಕೊಡುತ್ತೀರೋ? ನಿಮ್ಮ ಸಿಬ್ಬಂದಿಗಳು ಪಟ್ಟಣದಲ್ಲೇ ಇರುತ್ತಾರೋ ಅಥವಾ ಹಳ್ಳಿಗಳಿಗೂ ಹೋಗುತ್ತಾರೋ? ಆಮೇಲೆ ನೀವು ಔಷಧಿ ಏನು ಕೊಡುತ್ತೀರಿ? ನೀವು ತೆರೆದಿರುವ ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲ, ಔಷಧಿ ಇಲ್ಲ. ಈ ಎಲ್ಲಾ ಪ್ರಶ್ನೆಗಳಿಗೂ ಒಂದೇ ಸಾರಿ ಉತ್ತರ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆಯಲ್ಲಿ 93-94 ಕ್ಕೆ ಮಂಜೂರು ಮಾಡಲು ಕೇಳಿದ್ದಾರೆ. ಆದರೆ ಈಗ 92-93 ರಲ್ಲಿ ಮಾಡಬಹುದೇ ಎಂದು ಕೇಳಿದರು. ಅದಕ್ಕೆ ನನ್ನ ಉತ್ತರವೇನೆಂದರೆ ಈಗಾಗಲೇ ರಾಜ್ಯದಲ್ಲಿ 1200 ಪ್ರಾಥಮಿಕ ಕೇಂದ್ರಗಳು ಬೇಕಾಗಿದೆ. ನಾವು ಅವುಗಳನ್ನು ನಿಯಮಾವಳಿ ಪ್ರಕಾರ ಹಂತಹಂತದಲ್ಲಿ ಮಾಡಬೇಕು ಎಂದು ಹೇಳಿದ್ದೇವೆ. ಅವರು 92-93 ಕ್ಕೆ ಮಾಡಿ ಎಂದು ಕೇಳಿಲ್ಲ, 93-94 ಕ್ಕೆ ಮಾಡಿ ಎಂದು ಕೇಳಿದ್ದಾರೆ. ಅವರು 93-94 ಕ್ಕೆ ಕೇಳಿರುವುದರಿಂದ ಆ ವರ್ಷಕ್ಕೆ ಖಂಡಿತ ಮಾಡುತ್ತೇವೆ. ಎರಡನೆಯದಾಗಿ, ಔಷಧಿಗಳ ಬಗ್ಗೆ ಕೇಳಿದ್ದಾರೆ. ನಾವು ಈಗಾಗಲೇ ಔಷಧಿಯನ್ನು ಹೆಚ್ಚಿಗೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮೂರು ಮೂರೂವರೆ ಕೋಟಿ ರೂಪಾಯಿ ಔಷಧಿಗಾಗಿ ಈ ವರ್ಷ ಇಟ್ಟುಕೊಂಡಿದ್ದೇವೆ. ಹೆಚ್ಚು ಔಷಧ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ವೈದ್ಯರುಗಳು ಯಾವ ಹಳ್ಳಿಗೆ ಹೋಗಬೇಕೋ ಅಲ್ಲಿಗೆ ಹೋಗದೇ ಬರೀ ಪೇಟೆಯಲ್ಲಿ ಇರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದರ ಬಗ್ಗೆ ಸ್ವಲ್ಪ ಮಾಹಿತಿ ನೀಡಬೇಕು.

ಶ್ರೀ ಕೆ. ಎನ್. ನಾಗೇಗೌಡ : ಆ ವಿಚಾರ ನಿಜ ಇದೆ. ಈಗಾಗಲೇ ಈ ಇಲಾಖೆ ಒಳಗಡೆ ಎಷ್ಟೋ ವೈದ್ಯರುಗಳು ಬರೀ ಕೇಂದ್ರಗಳಲ್ಲಿ, ನಗರಗಳಲ್ಲಿ, ತಾಲ್ಲೂಕುಗಳಲ್ಲಿ ಇರಬೇಕು ಎಂದು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾನು ಕಟ್ಟುನಿಟ್ಟಾದ ಆದೇಶವನ್ನು ಕೊಟ್ಟಿದ್ದೇನೆ. ಹಳ್ಳಿಗಳಲ್ಲಿ ಪಶು ಪ್ರಾಣಿಗಳು ಇರುವುದು ಜಾಸ್ತಿ. ಯಾವ ವೈದ್ಯಾಧಿಕಾರಿ ಹಳ್ಳಿಗಳಿಗೆ ಹೋಗಿ ಕೆಲಸ ಮಾಡುವುದಿಲ್ಲ ಅವರ ಮೇಲೆ ಕಟ್ಟು ನಿಟ್ಟಾದ

ಕ್ರಮವನ್ನು ತೆಗೆದುಕೊಂಡಿದ್ದೇನೆ. ಈಗಾಗಲೇ 5-6 ಜನರನ್ನು ಸಸ್ಪೆಂಡ್ ಮಾಡಿದ್ದೇನೆ. ಇನ್ನು ಕಟ್ಟು ನಿಟ್ಟಾದಂತಹ ಕ್ರಮ ತೆಗೆದುಕೊಂಡು ವೈದ್ಯರುಗಳು ಹಳ್ಳಿಗಳಲ್ಲಿ ಸೇವೆ ಮಾಡುವುದಕ್ಕೆ ಪ್ರಯತ್ನ ಮಾಡಿಸುತ್ತೇನೆ. ಈಗಾಗಲೇ 133 ವೈದ್ಯರುಗಳನ್ನು ನೇಮಿಸಲು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಬರೆದಿದ್ದೇವೆ. ಕೂಡಲೇ ಅವರನ್ನು ನೇಮಕ ಮಾಡುತ್ತೇವೆ.

ವಿಷಯ : ವೀರಾಜ ಪೇಟೆ ತಾಲ್ಲೂಕಿನಲ್ಲಿ ಶಾಲೆಗಳ ದುಸ್ಥಿತಿ.

693

ಶ್ರೀಮತಿ ಸುಮ ವಸಂತ (ವೀರಾಜ ಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಶಾಲೆಗಳು ಜೀರ್ಣಾವಸ್ಥೆ-ಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಅಧ್ಯಾಪಕರ ಮತ್ತು ಸಿಬ್ಬಂದಿ ಕೊರತೆಯನ್ನು ಯಾವಾಗ ನಿವಾರಿಸಲಾಗುವುದು?

ಈ) ಸರ್ಕಾರ ಈ ವರ್ಷ ಶಾಲಾ ದುರಸ್ತಿಗಾಗಿ ಎಷ್ಟು ಹಣ ಮಂಜೂರು ಮಾಡಿರುತ್ತದೆ?

ಡಾ॥ ಹೆಗ್ಗಪ್ಪ .ಡಿ ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ವೀರಾಜಪೇಟೆ ತಾಲ್ಲೂಕಿನಲ್ಲಿ ಪ್ರಾಥ'ಮಿಕ ಶಾಲೆಗಳನ್ನು ದುರಸ್ಥಿಪಡಿಸ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರಿ ಆದೇಶ ಸಂಖ್ಯೆ : ಇಡಿ 198 ಯೋಸಕ 92 ದಿನಾಂಕ 2-1-92 ರಲ್ಲಿ ಮತ್ತು ದಿನಾಂಕ 18-8-92ರಲ್ಲಿ ಹಣ ಬಿಡುಗಡೆ ಮಾಡಿದೆ.

ಇ) ಕೊಡಗು ಜಿಲ್ಲೆಯಲ್ಲಿ ಒಟ್ಟು 214 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ವಿಶೇಷ ನೇಮಕಾತಿ ಮತ್ತು ಸಾಮಾನ್ಯ ನೇಮಕಾತಿ ನಿಯಮಗಳ ಪ್ರಕಾರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಮುಂಬರುವ 1993-94ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಕೊಡಗು ಜಿಲ್ಲೆಗೆ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ ದುರಸ್ತಿಗಾಗಿ ಪ್ರಸಕ್ತ ಸಾಲಿನಲ್ಲಿ 6 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ.